

# ಪ್ರಿಯಾಂಕಾ ಬೇಜಾರು

ಲಾಸ್ ಏಂಜಲೀಸ್– ಲಂಡನ್– ಮುಂಬೈ ಎಂದು ಸದಾ ತಿರುಗಾಡುತ್ತಿದ್ದ ಪ್ರಿಯಾಂಕಾ ಚೋಪ್ರಾ ಎರಡು ತಿಂಗಳ ಸುದೀರ್ಘ ಮನೆವಾಸದ ಬಳಿಕ ಕಳೆದ ವಾರ ಮೊದಲ ಬಾರಿಗೆ ಲಾಸ್ ಏಂಜಲೀಸ್‌ನಲ್ಲಿ ರಸ್ತೆಗೆ ಇಳಿದಿರುವ ವರದಿ ಬಂದಿದೆ. ಗಂಡ ನಿಕ್ ಜೊನಾಸ್– ಜೊತೆಗೆ ರಸ್ತೆಗಿಳಿದ ಪ್ರಿಯಾಂಕಾ, ತನ್ನ ಕಣ್ಣನ್ನೇ ತಾನು ನಂಬಲಿಲ್ಲವಂತೆ. 'ಜಗತ್ತು ನಿಜಕ್ಕೂ ಬದಲಾಗಿದೆ. ನಮ್ಮ ಜೀವನಶೈಲಿಯೇ ಉಲ್ಟಾಪಲ್ಟಾ ಆಗಿದೆ. ಆದರೆ ಕೋವಿಡ್ ವೈರಸನ್ನು ಎದುರಿಸಲು ಬೇರೆ ದಾರಿಯೇ ಇಲ್ಲ' ಎಂದಾಕೆ ಇನ್‌ಸ್ಟಾಗ್ರಾಮ್‌ನಲ್ಲಿ ಉಸುರಿದ್ದಾಳೆ.

ಲಾಕ್‌ಡೌನ್ ಆರಂಭದ ಮೊದಲ ವಾರದಲ್ಲೊಮ್ಮೆ ಇನ್‌ಸ್ಟಾಗ್ರಾಮ್‌ನಲ್ಲಿ ಬಂದಿದ್ದ ಆಕೆ ಹೋಮ್ ಕ್ವಾರಂಟೈನ್ ಬಗ್ಗೆ ಗಾಬರಿ ವ್ಯಕ್ತಪಡಿಸಿದ್ದಳು. ಆ ಬಳಿಕ ಎರಡು ತಿಂಗಳಲ್ಲಿ ಮನೆಯಲ್ಲಿಯೇ ಬ್ಯುಸಿಯಾಗಿ ಇರುವುದನ್ನು ಕಲಿತುಕೊಂಡಳಂತೆ. 'ಆದರೆ ಈ ಸಲ ಮದರ್ಸ್ ಡೇ ದಿನ ಇಬ್ಬರೂ ಅಮ್ಮಂದಿರ ಜೊತೆಗೆ ದಿನ ಕಳೆಯುವುದನ್ನು ಮಿಸ್ ಮಾಡಿಕೊಂಡೆವು' ಎನ್ನುವುದು ಆಕೆಯ ಬೇಜಾರು. ಕಳೆದ ವರ್ಷ ಮದರ್ಸ್ ಡೇ ದಿನ ಗಂಡ–ಹೆಂಡತಿ ಇಬ್ಬರೂ ತಾಯಂದಿರ ಜೊತೆಗೆ ಡ್ಯಾನ್ಸ್ ಮಾಡಿದ್ದ ಫೋಟೊವನ್ನು ನಿಕ್ ಜೊನಾಸ್ ಈ ಸಲದ ಮದರ್ಸ್ ಡೇ ದಿನ ಇನ್‌ಸ್ಟಾಗ್ರಾಮ್‌ನಲ್ಲಿ ಅಪ್‌ಲೋಡ್ ಮಾಡಿ ಹೆಂಡತಿಯನ್ನು ಸಂತೈಸಿದ್ದಾನೆ.

ಅಮೆರಿಕದಲ್ಲಿ ಕೋವಿಡ್ ಕಾಟ ಭಯಾನಕವಾಗಿದ್ದು 80 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಆದರೆ ಈಗ ಪರಿಸ್ಥಿತಿ ತಹಬಂದಿಗೆ ಬರುತ್ತಿದೆ ಎಂದಿದ್ದಾಳೆ ಪ್ರಿಯಾಂಕಾ. ■

# ಧನುಷ್- ಸಾರಾ ಜೋಡಿ



ಧನುಷ್ ಚಿತ್ರರಂಗಕ್ಕೆ ಕಾಲಿಟ್ಟು ಹದಿನೆಂಟು ವರ್ಷಗಳಾದದ್ದು ಕೋವಿಡ್ ಗದ್ದಲದಲ್ಲಿ ಗೊತ್ತೇ ಆಗಲಿಲ್ಲ. ತಂದೆ ಕಸ್ತೂರಿ ರಾಜಾ ನಿರ್ದೇಶನದಲ್ಲಿ ಮೊದಲ ಚಿತ್ರ 'ತುಲ್ಲುವದೊ ಇಳಮೈ' ಚಿತ್ರದಲ್ಲಿ ನಟಿಸಿದಾಗ ಮುಂದೊಂದು ದಿನ ಆತ ಸೂಪರ್‌ಸ್ಟಾರ್ ಆಗುವನೆಂಬ ನಿರೀಕ್ಷೆ ಇರಲಿಲ್ಲ. ಆದರೆ ಈಗ ತಮಿಳಿನಲ್ಲಿ ಧನುಷ್ ಅಭಿಮಾನಿಗಳದ್ದೇ ದೊಡ್ಡದೊಂದು ಗುಂಪಿದೆ. ರಜನಿಕಾಂತ್ ಅಳಿಯನಾದ ಬಳಿಕ ಈತನ ಇಮೇಜ್ ಕೂಡಾ ಬದಲಾಗಿದೆ.



ಕೋವಿಡ್ ಹಾವಳಿಯಿಂದಾಗಿ ಧನುಷ್ ಅಭಿನಯದ ಹಲವು ಚಿತ್ರಗಳ ಬಿಡುಗಡೆ ತಡವಾಗಿದೆ. ಮಾರಿ ಸೆಲ್ವರಾಜ್ ನಿರ್ದೇಶನದ 'ಕರ್ಣನ್' ಬಹುನಿರೀಕ್ಷೆಯ ಚಿತ್ರ. ಇದರ ಜೊತೆಗೆ 'ಮಾರಿಯಪ್ಪನ್', 'ಪಟ್ಟಾಸ್'. 'ತೂಟ' ಮುಂತಾಗಿ 2020ರಲ್ಲಿ ಬಿಡುಗಡೆ ಕಾಣಬೇಕಿದ್ದ ಧನುಷ್ ಚಿತ್ರಗಳ ಪಟ್ಟಿ ಉದ್ದವಿದೆ.

ತಮಿಳಿನಂತೆಯೇ ಧನುಷ್ ಹಿಂದಿಯಲ್ಲೂ ಬಹುಬೇಡಿಕೆಯ ನಟನಾಗಿರುವುದು ವಿಶೇಷ. ಕೋವಿಡ್ ದಾಳಿಗಿಂತ ಮುಂಚೆ ಈತನ ಹೊಸ ಹಿಂದಿ ಚಿತ್ರ 'ಅತ್ರಂಗಿ ರೇ' ಶೂಟಿಂಗ್ ಶುರುವಾಗಿತ್ತು. ಈ ಚಿತ್ರದಲ್ಲಿ ಅಕ್ಷಯ್ ಕುಮಾರ್ ಮುಖ್ಯ ಪಾತ್ರದಲ್ಲಿ ಇರುವುದು ಮತ್ತು ಸಾರಾ ಅಲಿ ಖಾನ್ ಜೊತೆಗೆ ಹೀರೊ ಪಾತ್ರ ನಿರ್ವಹಿಸುತ್ತಿರುವುದು ಕುತೂಹಲಕರ. ಸಾರಾ ಮತ್ತು ಧನುಷ್ ಜೋಡಿ ಇದೇ ಮೊದಲ ಬಾರಿಗೆ ಹಿಂದಿಯಲ್ಲಿ ನಟಿಸುತ್ತಿದೆ. ಹಿಂದೆ 'ರಂಝಾನಾ' 'ಶಮಿತಾಭ್' ಮುಂತಾದ ಚಿತ್ರಗಳಲ್ಲಿ ತನ್ನ ಅಭಿನಯ ಬಲದಿಂದಲೇ ಧನುಷ್ ಹಿಂದಿ ಪ್ರೇಕ್ಷಕರ ಗಮನ ಸೆಳೆದಿದ್ದರು. ಧನುಷ್ ನಟಿಸಿರುವ ಬಹುತೇಕ ಹಿಟ್ ತಮಿಳುಚಿತ್ರಗಳು ಹಿಂದಿಗೆ ಡಬ್ ಆಗಿವೆ.

■ ಬಿಂದು